ಶ್ರೀ ಹೆಚ್.ಡಿ.ರೇವಣ್ಣ:- ಮಾನ್ಯ ಅಧ್ಯಕ್ಷರೆ, ನಾನು writing ನಲ್ಲಿ ಕೊಟ್ಟಿದ್ದೇನೆ.

ಅಧ್ಯಕ್ಷರು:- ನಾನು ಎರಡು ಪ್ರಶ್ನೆಗಳನ್ನು ಮುಗಿಸಿ, ಅದು ಆದ ತಕ್ಷಣ ನಿಮಗೆ ಅವಕಾಶವನ್ನು ಕೊಡುತ್ತೇನೆ. Only two questions.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ: ಮಾನ್ಯ ಅಧ್ಯಕ್ಷರೆ, ನನಗೆ ಅವಕಾಶ ಕೊಡಿ, ಅಯಿತು, ಪ್ರಶ್ನೆಗಳನ್ನು ಮುಗಿಸಿ, ನನಗೆ ಅವಕಾಶ ಕೊಡಿ.

ಅಧ್ಯಕ್ಷರು: ಎರಡು ಪ್ರಶ್ನೆಗಳು ಇವೆ. ಅವಕಾಶ ಕೊಡುತ್ತೇನೆ. ಮುಗಿಸಿಬಿಡೋಣ. ಐದು ನಿಮಿಷಗಳಲ್ಲಿ ಮುಗಿಯುತ್ತದೆ.

ಪ್ರಾಥಮಿಕ & ಪ್ರೌಢಶಾಲೆಗಳ ಪ್ರಾರಂಭ

14 (7)

ಶ್ರೀ ಅಪ್ಪಾಜಿ @ ಚನ್ನಬಸವರಾಜ್ ಶಂಕರರಾವ್ ನಾಡಗೌಡ

(ಮುದ್ದೇಬಿಹಾಳ)

ಅ) ರಾಜ್ಯದಲ್ಲಿ ಹೊಸದಾಗಿ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳನ್ನು ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಆ) ಹಾಗಿದ್ದಲ್ಲಿ, ಎಷ್ಟು ಪ್ರಾಥಮಿಕ ಮತ್ತು ಪ್ರೌಢಶಾಲೆಗಳನ್ನು ಪ್ರಾರಂಭಿಸಲು ಉದ್ದೇಶಿಸಿದೆ. (ವಿವರ ನೀಡುವುದು);

ಇ) ರಾಜ್ಯದ ಉತ್ತರ ಕರ್ನಾಟಕ ಜಿಲ್ಲೆಗಳಿಗೆ ಹೊಸದಾಗಿ ಎಷ್ಟು ಪ್ರಾಥಮಿಕ ಮತ್ತು ಪ್ರೌಢಶಾಲೆಗಳನ್ನು ಪ್ರಾರಂಭಿಸುವ ಉದ್ದೇಶ ಸರ್ಕಾರದ ಮುಂದಿದೆ (ವಿವರ ನೀಡುವುದು)?

ಈ) ಮುದ್ದೇಬಿಹಾಳ ಮತ ಕ್ಷೇತ್ರದದಲ್ಲಿ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳನ್ನು ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಶ್ರೀ ವಿಶ್ವೇಶ್ವರಯ್ಯ ಹೆಗಡೆ ಕಾಗೇರಿ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ ರಾಜ್ಯದಲ್ಲಿ ಹೊಸದಾಗಿ ಪ್ರಾಥಮಿಕ ಶಾಲೆಯನ್ನು ಪ್ರಾರಂಭಿಸಲು ಉದ್ದೇಶಿಸಿರುವುದಿಲ್ಲ. ಹೊಸದಾಗಿ ಪ್ರೌಢಶಾಲೆಗಳನ್ನು ಪ್ರಾರಂಭಿಸಲು ಉದ್ದೇಶಿಸಿದೆ.

ಆ) ಪ್ರೌಢ ಶಿಕ್ಷಣಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ಕಾರ್ಯಕ್ರಮದಲ್ಲಿ 8ನೇ ತರಗತಿಯನ್ನು ಹೊಂದಿರುವ ಹಿರಿಯ ಪ್ರಾಥಮಿಕ ಶಾಲೆಗಳನ್ನು ಮಾತ್ರ ಉನ್ನತೀಕರಿಸಲು ಅವಕಾಶವಿರುತ್ತದೆ. ಈ ಕೆಳಗಿನ ನಿಯಮಗಳನ್ನು ಅನುಸರಿಸಿ ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರು ಪ್ರತಿ ವರ್ಷ ವಾರ್ಷಿಕ ಯೋಜನೆಯನ್ನು ಸಿದ್ದಪಡಿಸಿ ಸಲ್ಲಿಸಬೇಕಾಗಿರುತ್ತದೆ.

ಈ ಯೋಜನೆಯಲ್ಲಿ ಬರುವ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿ ಅನುಮೋದನೆ ಪಡೆಯಲಾಗುವುದು.

1. 5 ಕಿ.ಮೀ. ವ್ಯಾಪ್ತಿಯೊಳಗೆ ಸರ್ಕಾರಿ, ಅನುದಾನಿತ ಹಾಗೂ ಅನುದಾನ ರಹಿತ ಪ್ರೌಢಶಾಲೆಗಳು ಇರಬಾರದು.
2. 8ನೇ ತರಗತಿ ಹೊಂದಿರುವ ಹಿರಿಯ ಪ್ರಾಥಮಿಕ ಶಾಲೆಗಳನ್ನು ಮಾತ್ರ 9 ನೇ ತರಗತಿಯೊಂದಿಗೆ ಉನ್ನತೀಕರಿಸಲು ಅವಕಾಶವಿರುತ್ತದೆ.
3. 9ನೇ ತರಗತಿಗೆ 70 ಮಕ್ಕಳು ದಾಖಲಾಗುವಂತಿರಬೇಕು.
4. ಶೈಕ್ಷಣಿಕವಾಗಿ ಹಿಂದುಳಿದ ಬ್ಲಾಕುಗಳ ಶಾಲೆಗಳಲ್ಲಿ/ ಮೈನಾರಿಟಿ ಶಾಲೆಗಳಲ್ಲಿ ಕನಿಷ್ಟ 50 ಮಕ್ಕಳು ದಾಖಲಾಗುವಂತಿರಬೇಕು.
5. ಕಟ್ಟಡ ನಿರ್ಮಾಣಕ್ಕೆ ಅವಶ್ಯ ನಿವೇಶನ ಇರಬೇಕು.

ಈ ನಿಯಮಗಳನ್ನು ಅನುಸರಿಸಿ ಜಿಲ್ಲಾ ಉಪ ನಿರ್ದೇಶಕರು 2012–13ನೇ ಸಾಲಿಗೆ 138 ಹಿರಿಯ ಪ್ರಾಥಮಿಕ ಶಾಲೆಗಳನ್ನು ಪ್ರೌಢಶಾಲೆಗಳನ್ನಾಗಿ ಉನ್ನತೀಕರಿಸಲು ಪ್ರಸ್ತಾವನೆ ಸಲ್ಲಿಸಿದ್ದು ಕೇಂದ್ರ ಸರ್ಕಾರದ

ಅನುಮೋದನೆಗೆ ಸಲ್ಲಿಸಲಾಗಿತ್ತು. ಕೇಂದ್ರ ಸರ್ಕಾರದಿಂದ 2012–13ನೇ ಸಾಲಿಗೆ ಪ್ರೌಢಶಾಲೆ ಪ್ರಾರಂಭಿಸಲು ಅನುಮೋದನೆ ದೊರೆತಿರುವುದಿಲ್ಲ.

ಇ) ಉತ್ತರ ಕರ್ನಾಟಕ ಜಿಲ್ಲೆಗಳಿಗೆ ಸಂಬಂಧಿಸಿದಂತೆ 8ನೇ ತರಗತಿ ಹೊಂದಿರುವ 102 ಹಿರಿಯ ಪ್ರಾಥಮಿಕ ಶಾಲೆಗಳನ್ನು ಉನ್ನತೀಕರಿಸಲು ಪ್ರಸ್ತಾವನೆ ಸಲ್ಲಿಸಲಾಗಿತ್ತು. ಜಿಲ್ಲಾವಾರು ವಿವರ ಲಗತ್ತಿಸಿದೆ.

ಈ) ಬಿಜಾಪುರ ಜಿಲ್ಲೆಯ 2012–13ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಲ್ಲಿ ಮುದ್ದೇಬಿಹಾಳ ತಾಲ್ಲೂಕಿನ ಯಾವುದೇ ಶಾಲೆಗಳನ್ನು ಉನ್ನತೀಕರಣಕ್ಕಾಗಿ ಪ್ರಸ್ತಾವನೆಯಲ್ಲಿ ಸಲ್ಲಿರುವುದಿಲ್ಲ.

ಶ್ರೀ ಅಪ್ಪಾಜಿ ಚನ್ನಬಸವರಾಜ್ ಶಂಕರರಾವ್ ನಾಡಗೌಡ:- ಮಾನ್ಯ ಅಧ್ಯಕ್ಷರೆ, ಸರ್ಕಾರ ಉತ್ತರವನ್ನು ಕೊಟ್ಟಿದೆ, ಬಹಳ ಜಾಣತನದಿಂದ ಜಾರಿಕೊಳ್ಳುವಂಥ ಉತ್ತರವನ್ನು ಕೊಟ್ಟಿದ್ದಾರೆ. ಇವರು ಎಲ್ಲವನ್ನು ಕೂಡ ಸರ್ವ ಶಿಕ್ಷಣ ಅಭಿಯಾನದ ಮೇಲೆ ಹಾಕಿದ್ದಾರೆ. ಸರ್ವ ಶಿಕ್ಷಣ ಅಭಿಯಾನದ ಅಡಿಯಲ್ಲಿ ನಿಯಮಗಳು ಏನೇನು ಇವೆ, ನಾವು ಆ ಕಾರಣಕ್ಕೋಸ್ಕರವಾಗಿ ಎಲ್ಲಿಯೂ ಹೊಸದಾಗಿ ಪ್ರೌಢಶಾಲೆಗಳನ್ನು ಪ್ರಾರಂಭಿಸುತ್ತಿಲ್ಲವೆಂಬ ಉತ್ತರವನ್ನು ಕೊಟ್ಟಿದ್ದಾರೆ. ಈಗ ಬೇರೆ ಪ್ರಶ್ನೆಗಳ ವೇಳೆಯಲ್ಲಿ ನಮ್ಮ ಸ್ನೇಹಿತರು ಸಾಕಷ್ಟು ಆಕ್ಷೇಪವನ್ನು ಎತ್ತಿದ್ದಾರೆ. ಸರ್ಕಾರ ಕಳೆದ ನಾಲ್ಕೂವರೆ ವರ್ಷದಿಂದಲೂ ಒಂದೂ ಶಾಲೆಯನ್ನು ಪ್ರಾರಂಭ ಮಾಡಿಲ್ಲ. ಇದರ ಜೊತೆ ಜೊತೆಗೆ ಕೇಳಿದಾಗ ಮುದ್ದೇಬಿಹಾಳ ತಾಲ್ಲೂಕು, ಬಿಜಾಪುರ ಜಿಲ್ಲೆಗೆ ಸಂಬಂಧಪಟ್ಟಂತೆ ಪ್ರಶ್ನೆಯನ್ನು ಕೇಳಿದಾಗ ಒಂದೂ ಪ್ರಸ್ತಾವನೆ ಇಲ್ಲವೆಂಬ ಮಾಹಿತಿಯನ್ನು ಕೊಟ್ಟಿದ್ದಾರೆ. ಅಂದರೆ ಇದರ ಬಗ್ಗೆ ಸರ್ಕಾರಕ್ಕೆ ಆಸಕ್ತಿ ಇದೆಯೋ, ಇಲ್ಲವೊ? ತಾವು ನಿಮ್ಮ ಸಂಪನ್ಮೂಲದಿಂದಲೇ ಹೊಸದಾಗಿ ಪ್ರೌಢ ಶಿಕ್ಷಣ ಶಾಲೆಗಳನ್ನು ಪ್ರಾರಂಭ ಮಾಡುವುದಕ್ಕೆ ತೊಂದರೆ ಏನು? ತಾವು SSA ಯನ್ನು ಹೊರತು ಪಡಿಸಿ ಶಾಲೆಗಳನ್ನು ಪ್ರಾರಂಭ ಮಾಡಬಹುದು, ಇದಕ್ಕೆ ಏನೂ ನಿರ್ಬಂಧವಿಲ್ಲ. ನೀವು ಏಕೆ ಮಾಡುತ್ತಿಲ್ಲವೆಂಬುದು ನನ್ನ ಪ್ರಶ್ನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಮಾನ್ಯ ಅಧ್ಯಕ್ಷರೆ, ಮಾನ್ಯ ಅಪ್ಪಾಜಿ ನಾಡಗೌಡರು ಮುದ್ದೇಬಿಹಾಳ ತಾಲ್ಲೂಕಿಗೆ ಹೊಸ ಹೈಸ್ಕೂಲ್ ಬೇಕೆಂಬ

ಉದ್ಧೇಶದಿಂದ ಸವಿಸ್ತಾರವಾದಂಥ ಪ್ರಶ್ನೆಯನ್ನು ಕೇಳಿದ್ದಾರೆ. ಈಗ ಪ್ರಾಥಮಿಕ ಶಾಲೆ ಎಲ್.ಪಿ.ಎಸ್., ಹೆಚ್.ಪಿ.ಎಸ್., ಬೇಡಿಕೆಗಳು ಎಲ್ಲೂ ಇಲ್ಲ. ಅದು ಏಕೆಂದರೆ, ಸರ್ವ ಶಿಕ್ಷಣ ಅಭಿಯಾನ ೨೦೦೦-೨೦೦೧ರಲ್ಲಿ ಪ್ರಾರಂಭವಾದ ನಂತರ, ನಮ್ಮ ರಾಜ್ಯ ದೇಶದ ಉಳಿದ ರಾಜ್ಯಗಳಿಗಿಂತಲೂ ಬಹಳ ಚೆನ್ನಾಗಿ ಎಲ್.ಪಿ.ಎಸ್. ಮತ್ತು ಹೆಚ್.ಪಿ.ಎಸ್.ಶಾಲೆಗಳನ್ನು ಪ್ರಾರಂಭ ಮಾಡಿರುವುದರಿಂದ ನಮಗೆ ಅಂಥ ಅಗತ್ಯತೆಗಳು ಎಲ್ಲೂ ಕಂಡು ಬರುತ್ತಿಲ್ಲ. ಎಲ್ಲೂ ಶಾಲೆಗಳು ಬೇಕೆಂದು ಹೇಳಿಲ್ಲ. ಈಗ ಗುಣಮಟ್ಟದ ಶಿಕ್ಷಣವನ್ನು ಕೊಡಿಯೆಂದು ಕೇಳುತ್ತಿದ್ದಾರೆ, ಇದು ಪ್ರಾಥಮಿಕ ಹಂತದಲ್ಲಿ ಬರುತ್ತಿವೆ. ಈಗಾಗಲೇ ಸುಮಾರು ೨೭,೦೦೦ ಎಲ್.ಪಿ.ಎಸ್.ಶಾಲೆಗಳಿವೆ. ಸುಮಾರು 33,000 ಹೆಚ್.ಪಿ.ಎಸ್.-ಶಾಲೆಗಳಿವೆ. ಹಾಗಾಗಿ ನಾವು ಉಚಿತ ಮತ್ತು ಕಡ್ಡಾಯ ಶಿಕ್ಷಣವೆಂಬ ಕಾಯಿದೆಯನ್ನು ಸ್ವೀಕಾರ ಮಾಡಿ, 6ನೇ ವಯಸ್ಸಿನಿಂದ 14ನೇ ವಯಸ್ಸಿನ ವರೆಗೂ ಮಕ್ಕಳಿಗೆ ಶಿಕ್ಷಣವನ್ನು ಸಂವಿಧಾನ ಬದ್ಧವಾಗಿ, ಕಾಯಿದೆ ಬದ್ಧವಾಗಿ ಏನು ಕೊಡುತ್ತಿದ್ದೇವೆ, ಆ ಶಿಕ್ಷಣವನ್ನು ಕೊಡುವುದಕ್ಕೆ ಶಾಲೆಗಳು ಬೇಕೆಂಬ ಬೇಡಿಕೆಗಳು ಇಲ್ಲ. ಆ ರೀತಿ ಏನಾದರೂ ಬೇಡಿಕೆಗಳು ಇದ್ದಲ್ಲಿ ರಾಜ್ಯ ಸರ್ಕಾರದ ನಿಧಿಯಿಂದಲೂ ಕೊಡುತ್ತೇವೆ ಅಥವಾ ಸರ್ವ ಶಿಕ್ಷಣ ಅಭಿಯಾನದಿಂದಲೂ ಕೊಡುವುದಕ್ಕೆ ಅವಕಾಶ ಇದೆ, ಅದರಿಂದಲೂ ಕೊಡುತ್ತೇವೆ. ಈಗ ತಾವು ಮುದ್ದೇಬಿಹಾಳ ತಾಲ್ಲೂಕಿನ ಬಗ್ಗೆ ಪ್ರಶ್ನೆಯನ್ನು ಕೇಳಿರುವಂಥದ್ದು, ಹೈಸ್ಕೂಲ್ ಬೇಕೆಂದು ಹೇಳಿದ್ದೀರಿ. ನಾವು ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ಹೈಸ್ಕೂಲ್‌ಗಳನ್ನು ಕೊಟ್ಟಿದ್ದೇವೆ ಈಗ ಕಳೆದ ನಾಲ್ಕೂವರೆ ವರ್ಷಗಳ ಅವಧಿಯಲ್ಲೂ ಸಹ 331 ಹೈಸ್ಕೂಲ್‌ಗಳನ್ನು (RMSA) ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಯೋಜನೆಯಿಂದ ಕೊಟ್ಟಿದ್ದೇವೆ. ಈ ವರ್ಷವೂ ಸಹ ೧೩೮ ಶಾಲೆಗಳನ್ನು ಆರ್‌ಎಂಎಸ್‌ಎಯಲ್ಲಿ ಕೇಳಿದ್ದೇವೆ. ಅದರಲ್ಲಿ ೧೦೨ ಶಾಲೆಗಳು ಉತ್ತರ ಕರ್ನಾಟಕದ ಭಾಗಕ್ಕೆ ಇದೆ. 138 ಅನ್ನು ಆರ್‌ಎಮ್‌ಎಸ್-ಎಯಲ್ಲಿ ರಾಜ್ಯ ಮಟ್ಟದಲ್ಲಿ ಉನ್ನತೀಕರಿಸಬೇಕಾದಂಥ ಹೈಸ್ಕೂಲ್‌ಗಳು ಬೇಕೆಂದು ಕೇಳಿದ್ದೇವೆ. ಇದನ್ನು ಕೊಡಬೇಕು. ಇದಕ್ಕೆ ಕೇಂದ್ರಸರ್ಕಾರ ಏನು ಮಾಡುತ್ತಿದೆಯೆಂದರೆ, ಆನೇಕ ಸಂದರ್ಭದಲ್ಲಿ ನಾವು ಕೇಳಿದಷ್ಟು ಪ್ರಮಾಣದಲ್ಲಿ ಕೊಡುತ್ತಿಲ್ಲ. ಕಳೆದ ಮೂರು ವರ್ಷಗಳಲ್ಲಿ 331 ಶಾಲೆಗಳನ್ನು ಕೊಟ್ಟಿದ್ದಾರೆ.

ಆದರೆ ನಾವು ಒಂದೊಂದು ವರ್ಷಕ್ಕೆ 400, 500, 600 ಶಾಲೆಗಳನ್ನು ಈ ರೀತಿಯಾಗಿ ಕೇಳಿದ್ದೇವೆ. ಆದರೆ ಕೊಡುವಾಗ 100, 200 ಶಾಲೆಗಳನ್ನು ಕೊಟ್ಟು ಈಗ 331 ಶಾಲೆಗಳು ಆಗಿದೆ. ನಾವು ಕೇಳಿದಷ್ಟು ಕೊಟ್ಟಿಲ್ಲ, ಹಿಂದೆ ಬೇರೆ ಬೇರೆ ರಾಜ್ಯಗಳಿಗೆ ಕೊಟ್ಟಿದೆ. ಆದರೆ ನಮ್ಮ ರಾಜ್ಯಕ್ಕೆ ತಾವು ಎಲ್ಲಾ ಪರಿಣಾಮಕಾರಿಯಾಗಿ ಮನದಟ್ಟು ಮಾಡಿಕೊಡುವುದು ಸಾಕಾಗಿಲ್ಲವೋ ಏನೋ, ಒಟ್ಟಾರೆ ನಮ್ಮ ನಿರೀಕ್ಷೆಗೆ ತಕ್ಕಂತೆ ನಮಗೆ ಕೇಂದ್ರಸರ್ಕಾರ ಉನ್ನತೀಕರಿಸಿದಂಥ ಅರ್‌ಎಮ್‌ಎಸ್‌ಎ ಹೈಸ್ಕೂಲ್ ಗಳನ್ನು ನಮಗೆ ಕೊಡುತ್ತಿಲ್ಲ. ಈಗಲೂ ನಾವು ಕೇಳಿದ್ದೇವೆ, ಕೇಂದ್ರಸರ್ಕಾರದ ಮೇಲೆ ಒತ್ತಡವನ್ನು ತರುತ್ತೇವೆ. ನಮಗೆ ಕೇಂದ್ರಸರ್ಕಾರ ಕೊಡುತ್ತದೆಂಬ ಭರವಸೆ ಇದೆ. ಒಮ್ಮೆ ಕೇಂದ್ರಸರ್ಕಾರ ಕೊಡುವುದಿಲ್ಲವೆಂದರೆ, ರಾಜ್ಯ ಸರ್ಕಾರದಿಂದ ನಾವು ಮುಂದಿನ ದಿವಸಗಳಲ್ಲಿ ಇನ್ನು ಹೆಚ್ಚಿನ ಹೈಸ್ಕೂಲ್‌ಗಳನ್ನು ಕೊಡುವುದಕ್ಕೆ ಬದ್ಧರಾಗಿದ್ದೇವೆ.

(ಗೊಂದಲ)

ಅಧ್ಯಕ್ಷರು:- ಮಂತ್ರಿಗಳು ಉತ್ತರವನ್ನು ಕೊಡುವುದಕ್ಕೆ ಬಿಡಲಿಲ್ಲವೆಂದರೆ ಹೇಗೆ ?

ಶ್ರೀ ಅಮರೇಗೌಡ ಬಯ್ಯಾಪುರ:- ಮಾನ್ಯ ಅಧ್ಯಕ್ಷರೆ, ಕೇಂದ್ರಸರ್ಕಾರದಿಂದ ಬಂದಿರುವಂಥ ಹಣವನ್ನು ಖರ್ಚು ಮಾಡಿಲ್ಲ.

ಅಧ್ಯಕ್ಷರು:- ಮಾನ್ಯ ಮಂತ್ರಿಯವರು ಉತ್ತರವನ್ನು ನೀಡಲಿ, ಇಲ್ಲದಿದ್ದರೆ ಈ ಪ್ರಶ್ನೆಯನ್ನು ಮುಕ್ತಾಯ ಮಾಡುತ್ತೇನೆ, ಅಷ್ಟೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಮಾನ್ಯ ಅಧ್ಯಕ್ಷರೆ, ಕೇಂದ್ರಸರ್ಕಾರ ಕೊಟ್ಟಿರುವಂಥ ಹಣವನ್ನು ಅತ್ಯುತ್ತಮವಾಗಿ ಖರ್ಚು ಮಾಡಿರುವಂಥದ್ದು ಕರ್ನಾಟಕ ರಾಜ್ಯವೆಂದು ಕೇಂದ್ರಸರ್ಕಾರದ ಶಿಕ್ಷಣ ಸಚಿವರೇ ಹೇಳಿದ್ದಾರೆ. ಹಾಗಾಗಿ ಕೇಂದ್ರಸರ್ಕಾರ ಕೊಟ್ಟಿರುವಂಥ ಹಣವನ್ನು ನಾವು ಚೆನ್ನಾಗಿ ಖರ್ಚು ಮಾಡಿದ್ದೇವೆ.

(ಗೊಂದಲ)

ಅಧ್ಯಕ್ಷರು:- ಮಾನ್ಯ ಮಂತ್ರಿಯವರೆ, ತಾವು ಉತ್ತರ ಹೇಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಮಾನ್ಯ ಅಧ್ಯಕ್ಷರೆ, ಈಗ ಕೇಂದ್ರಸರ್ಕಾರ ಆರ್‌ಎಂಎಸ್‌ಎ ಯೋಜನೆಯಡಿಯಲ್ಲಿ ನಮಗೆ 331 ಶಾಲೆಗಳನ್ನು ಏನು ಕೊಟ್ಟಿದ್ದಾರೆ. ಈ ವರ್ಷ 138 ಶಾಲೆಗಳನ್ನು ಕೊಡುತ್ತೇವೆಂದು ಹೇಳಿದ್ದಾರೆ. ಆದರೆ ಇದನ್ನು ಇನ್ನು ಕೊಡಲಿಲ್ಲ, ಈ ವರ್ಷ ಈ ೧೩೮ ಶಾಲೆಗಳನ್ನು ಕೊಡಬೇಕಾಗಿತ್ತು. ಇನ್ನು ೫೦೦ಕ್ಕೂ ಹೆಚ್ಚು ಶಾಲೆಗಳನ್ನು ಕೊಡುವುದು ಇದೆ. 6-14 ವರ್ಷದವರೆಗೆ ಇದ್ದದನ್ನು 6-16 ವರ್ಷದವರೆಗೆ ಅಂದರೆ ೮ನೇ ತರಗತಿಯಿಂದ ೧೦ನೇ ತರಗತಿಯವರೆಗೂ ಕೇಂದ್ರ ಸರ್ಕಾರ RTE ಯನ್ನು ಜಾರಿಗೊಳಿಸುತ್ತೇವೆಂದು ಹೇಳಿದ್ದಾರೆ.

ಕೇಂದ್ರ ಸರ್ಕಾರವೂ ಸಕಾರಾತ್ಮಕವಾಗಿ ಸ್ಪಂದಿಸುತ್ತಿದೆ. ಅದೂ ಸಹ ಅಂದರೆ 10ನೇ ತರಗತಿಯವರೆಗೆ ಪ್ರಾಥಮಿಕ ಶಿಕ್ಷಣವಾಗಿಯೇ ಮುಂದುವರೆದರೆ ನಮ್ಮ ಮಕ್ಕಳಿಗೆ ಒಳ್ಳೆಯದಾಗುತ್ತದೆ. ಏಕೆಂದರೆ, ಇವತ್ತು ಹೆಚ್ಚು ಶಿಕ್ಷಣವನ್ನು ಕೊಡಬೇಕೆಂದು ನಮ್ಮ ಪಾಲಕರು ಬಯಸುತ್ತಾರೆ, ವಿದ್ಯಾರ್ಥಿಗಳೂ ಬಯಸುತ್ತಾರೆ. ಹಾಗಾಗಿ, R.T.E. ವ್ಯಾಪ್ತಿಯನ್ನು 14ರಿಂದ 16ನೇ ವಯಸ್ಸಿನವರೆಗೆ, ಅಂದರೆ 10ನೇ ತರಗತಿಯವರೆಗೆ ಹೆಚ್ಚಿಸಬೇಕು. R.M.S.A.ನಲ್ಲಿ ಕೇಂದ್ರ ಸರ್ಕಾರ ನಾವು ಕೇಳಿರುವ ಬೇಡಿಕೆಗಳಿಗೆ ಸ್ಪಂದಿಸಿ ಮಂಜೂರು ಮಾಡಬೇಕು. ಅದು ಆಗದಿದ್ದರೆ, ಮಂಜೂರು ಮಾಡಿಕೊಡುವುದಕ್ಕೆ ನಾವು ರಾಜ್ಯ ಸರ್ಕಾರದವರು ಸಿದ್ಧರಿದ್ದೇವೆ.

(ಗೊಂದಲ)

ಅಧ್ಯಕ್ಷರು:- ಉತ್ತರ ಹೇಳುವುದಕ್ಕೂ ನೀವು ಬಿಡದಿದ್ದರೆ ಹೇಗೆ?

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ನಾವು ಮಾಡಬೇಕಾಗಿರುವುದನ್ನು ನಾವು ಮಾಡೋಣ.

(ಗೊಂದಲ)

ಅಧ್ಯಕ್ಷರು:- ಅದು ನಿಮ್ಮ ಪ್ರಶ್ನೆಯಲ್ಲ, ಪ್ರಶ್ನೆ ಕೇಳಿದವರು ಸುಮ್ಮನಿದ್ದಾರೆ.

(ಗೊಂದಲ)

ಶ್ರೀ ಅಪ್ಪಾಜಿ ಸಿ.ಎಸ್. ನಾಡಗೌಡ:- ಮೂಲಭೂತವಾಗಿ ಬಹಳ ಜಾರಿಕೊಳ್ಳುವಂಥ ಉತ್ತರವನ್ನು ಕೊಟ್ಟಿದ್ದಾರೆ ಎಂದು ನಾನು ಪ್ರಾರಂಭದಲ್ಲೇ ಹೇಳಿದ್ದೇನೆ. ಅವರೂ ಕೂಡ ಹೇಳುತ್ತಿದ್ದಾರೆ, R.M.S.A.ನಲ್ಲಿ ನಮಗೆ ಕೇಂದ್ರ ಸರ್ಕಾರದಿಂದ ಮಂಜೂರಾತಿ ಬರದಿದ್ದರೆ, ರಾಜ್ಯ ಸರ್ಕಾರದಿಂದ ಕೊಡಲು ನಾವು ಬದ್ಧರಾಗಿದ್ದೇವೆ ಎಂದು ಹೇಳುತ್ತಿದ್ದಾರೆ. ನಾನು ತಮ್ಮ ಮುಖೇನ ಕೇಳುವುದು ಇಷ್ಟೇ, ಈ ವರ್ಷ ಎಷ್ಟು ಶಾಲೆಗಳನ್ನು ಹೊಸದಾಗಿ ಪ್ರಾರಂಭ ಮಾಡುತ್ತೀರಿ ಎನ್ನುವುದನ್ನು ನಿಖರವಾಗಿ ತಾವು ಈ floor of the House ನಲ್ಲಿ ಕಮಿಟ್‌ಮೆಂಟ್ ಮಾಡಿ. ನಾವು ಬರೀ ಸರ್ವ ಶಿಕ್ಷಣ ಅಭಿಯಾನದ ಕಡೆಗೇ ನೋಡುವುದಾದರೆ, ನಿಮ್ಮ Education Policy ಏನು? ರಾಜ್ಯ ಸರ್ಕಾರದ ಬದ್ಧತೆ ಏನು?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ನಾನು ಬಹಳ ಸುಧೀರ್ಘವಾಗಿ ಉತ್ತರವನ್ನು ಹೇಳಿದ್ದೇನೆ. ಈಗ academic year ನಡೆಯುತ್ತಿದೆ, ಅರ್ಧ term ಆಗಿದೆ, ಅರ್ಧ term ನಡೆಯುತ್ತಿದೆ. ಮುಂದಿನ ಬಜೆಟ್ ಸಂದರ್ಭದಲ್ಲಿ ನಿಶ್ಚಿತವಾಗಿ ಈ ರೀತಿಯ ಅಗತ್ಯವಾದ ಬೇಡಿಕೆಗಳಿಗೆ ಸ್ಪಂದಿಸಬೇಕಾಗಿರುವುದು ನಮ್ಮ ರಾಜ್ಯ ಸರ್ಕಾರದ ಜವಾಬ್ದಾರಿಯಾಗಿರುತ್ತದೆ. R.M.S.A.-ನಲ್ಲಿ ಉನ್ನತೀಕರಿಸಲು ನಾವು ಕಳುಹಿಸಿರುವ ಪ್ರಸ್ತಾವನೆಗೆ ತಾವುಗಳು ಅದುವರೆಗೆ ಕೇಂದ್ರದಿಂದ ಒಪ್ಪಿಗೆ ಕೊಡಿಸಿದರೆ ದೊಡ್ಡ ಸಹಾಯವಾ ಗುತ್ತದೆ.

ಶ್ರೀ ಅಪ್ಪಾಜಿ ಸಿ.ಎಸ್. ನಾಡಗೌಡ:- ಇದು ಒಂದೇ ಸಲವಲ್ಲ. ಕೇಂದ್ರ ಸರ್ಕಾರದ ಯಾವುದೇ ಒಂದು ಯೋಜನೆ ಬಂದರೂ ಸಹ ನೀವು ಒತ್ತಾಯ ತಗೆದುಕೊಂಡು ಬನ್ನಿ ಎಂದು ಈ ಕಡೆ ಕೈ ಮಾಡಿ ತೋರಿಸುತ್ತಾರೆ. We are not Members of the Parliament; neither are we part of the Union Government. You should always know that, it is your responsibility, it is the responsibility of the Government. It is not the responsibility of the opposition Members sitting here. ಅದು ನಿಮ್ಮ ಜವಾಬ್ದಾರಿ. ಅದು ಆಗದಿದ್ದರೆ ನೀವು ನಿಮ್ಮ ಬದ್ಧತೆಯನ್ನು ತೋರಿಸಬೇಕು. State Government should say, Yes, ನಾವು

ಶಾಲೆಗಳನ್ನು ಹೊಸದಾಗಿ ಪ್ರಾರಂಭ ಮಾಡುತ್ತೇವೆ, ಶಿಕ್ಷಣಕ್ಕೆ ಹೆಚ್ಚು ಒತ್ತನ್ನು ಕೊಡುತ್ತೇವೆ ಎನ್ನುವ ಮಾತು ನಿಮ್ಮಿಂದ ಬರಬೇಕೇ ವಿನ: ಅದಕ್ಕೆ ನಮ್ಮ ಕಡೆ ಬೆರಳು ಮಾಡಿ ತೋರಿಸುವುದಲ್ಲ. ನಾನು ಒತ್ತಾಯ ಮಾಡುತ್ತೇನೆ, ಮುಂದೆ ಬರುವ ಬಜೆಟ್‌ವರೆಗೂ ಕಾಯಬೇಕಾಗಿಲ್ಲ, ಈ ಸದನದಲ್ಲೇ ಅವರು ಒಂದು announcement ಮಾಡಲಿ. ನಾವು ಬದ್ಧರಾಗಿದ್ದೇವೆ, ನಾವು ಶಿಕ್ಷಣಕ್ಕೆ ಹೆಚ್ಚು ಒತ್ತನ್ನು ಕೊಡುತ್ತೇವೆ, ಆ ಪ್ರಕಾರವಾಗಿ ನಾವು ಹೊಸ ಶಾಲೆಗಳನ್ನು ಪ್ರಾರಂಭ ಮಾಡುತ್ತೇವೆ ಎಂದು ಹೇಳಲಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಮಾನ್ಯ ಅಪ್ಪಾಜಿ ನಾಡಗೌಡರು ಕೇಳಿರುವುದಕ್ಕೆ ನಾನು ಕೊನೆಯದಾಗಿ ಉಲ್ಲೇಖಿಸುವುದು ಇಷ್ಟೇ, ರಾಜ್ಯ ಸರ್ಕಾರದವರಾದ ನಾವು ಇದುವರೆಗೂ ಈ ರೀತಿಯ ಚಟುವಟಿಕೆಗಳಿಗೆ ಮೊದಲಿನಿಂದಲೂ ಸ್ಪಂದಿಸಿಕೊಂಡು ಬಂದಿದ್ದೇವೆ. ಉದಾಹರಣೆಗೆ ಹೇಳುವುದಾದರೆ, 4437 Government High Schools ಇವೆ, 3367 aided institutions ಇವೆ ಮತ್ತು 5254 unaided institutions ಇವೆ. ಒಟ್ಟು ಸುಮಾರು 14 ಸಾವಿರಕ್ಕಿಂತ ಹೆಚ್ಚು ಹೈಸ್ಕೂಲುಗಳು ಈಗಾಗಲೇ ರಾಜ್ಯದಲ್ಲಿವೆ. 331 ಹೈಸ್ಕೂಲುಗಳನ್ನು ಕಳೆದ ೨-೩ ವರ್ಷಗಳಲ್ಲಿ R.M.S.A.-ನಲ್ಲಿ ನಾವೇ ಉನ್ನತೀಕರಿಸಿದ್ದೇವೆ. ಇದು R.M.S.A.ನಲ್ಲಿ ರಾಜ್ಯ ಸರ್ಕಾರದ ಒಂದು ಭಾಗ. ಹಾಗಾಗಿ, ನಾವೂ ಸಹ ಮಾಡುತ್ತಿದ್ದೇವೆ. ಕೇಂದ್ರ ಸರ್ಕಾರದಲ್ಲಿ ನಾವು ನಿರಂತರವಾಗಿ ಪ್ರಯತ್ನವನ್ನು ಮಾಡುತ್ತಿದ್ದೇವೆ, ಆ ಪ್ರಯತ್ನವನ್ನು ಮುಂದುವರೆಸುತ್ತೇವೆ. ಅದು ಆಗದೇ ಇದ್ದಲ್ಲಿ ಅದರಲ್ಲಿ ರಾಜ್ಯ ಸರ್ಕಾರದ ಜವಾಬ್ದಾರಿಯೂ ಇದೆ, ನಾವೂ ಆ ಶಾಲೆಗಳನ್ನು ತೆರೆಯುವುದಕ್ಕೆ ನಿಶ್ಚಿತವಾಗಿ ಮುಂದಾಗೋಣ.